**<u>ದಿನಾಂಕ:29-11-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ.ಸಿ.ಬಿ., ವಕೀಲರಿಂದ:</u>**

ನಮ್ಮ ಮದುವೆ ಹಿರಿಯರು ಕೂಡಿ ಮಾಡಿದ ಮದುವೆ ಎಂದರೆ ಸರಿ. ಮದುವೆಯಾಗಿ 3 ತಿಂಗಳುಗಳ ಅರ್ಜಿದಾರರು ನನ್ನ ಜೊತೆ ಚೆನ್ನಾಗಿ ಇದ್ದರು. ಆ

ಸಮಯದಲ್ಲಿ ಅರ್ಜಿದಾರಳು ತವರು ಮನೆ ಮತ್ತು ನನ್ನ ಮನೆ ಎರಡೂ ಕಡೆ ಹೋಗಿ ಬಂದು ಮಾಡುತ್ತಿದ್ದಳು. ನನ್ನ ಮದುವೆಯಾದ 3 ತಿಂಗಳುಗಳ ನಂತರ ಅರ್ಜಿದಾರರ ತಂದೆ ತೀರಿಹೋಗಿದ್ದಾರೆ ಎಂದರೆ ಸರಿ. ನಮ್ಮ ಮದುವೆ ವೀರಭದ್ರೇಶ್ವರ ಛತ್ರದಲ್ಲಿ ಆಗಿರುತ್ತದೆ. ಮದುವೆಯ ಕಾಲಕ್ಕೆ ಯಾವುದೇ ವರದಕ್ಷಿಣೆಯನ್ನು ನೀಡಿರುವುದಿಲ್ಲ. ನಿಪಿ-1 ರಿಂದ ನಿಪಿ-9 ರಲ್ಲಿ ನಾರಾಯಣಪ್ಪ ಎಂದು ತೋರಿಸಲಾಗಿದೆ ಎಂದರೆ ಸರಿ. ಸದರಿ ನಾರಾಯಣಪ್ಪ ಎಂದರೆ ಇಬ್ಬರು ವ್ಯಕ್ತಿಗಳು ಇದ್ದಾರೆ, ಅವರುಗಳು ನನ್ನ ತಂದೆ ಮತ್ತು ನನ್ನ ದೊಡ್ಡಪ್ಪನ ಮಗ. ಬಾಣಾವರದಲ್ಲಿ ನನ್ನ ತಂದೆಗೆ 2 ಮನೆ ಮತ್ತು 5 ನಿವೇಶನಗಳು ಇವೆ ಎಂದರೆ ಸಾಕ್ಷಿಯು ಎರಡು ಮನೆಗಳು ಇವೆ, ನಿವೇಶಗಳು ಇಲ್ಲವೆಂದು ನುಡಿಯುತ್ತಾರೆ. ಬಾಣಾವರದಲ್ಲಿ ಬೀರಲಿಂಗೇಶ್ವರ ಪ್ರಾವಿಜನ್ ಸ್ಟೋರ್ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನನಗೆ ತಂದೆಗೆ ಸೇರಿದ್ದು ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಅರ್ಜಿದಾರರು ಗರ್ಭವತಿಯಾಗಿದ್ದರು ಎಂದರೆ ಸರಿ. ನಾನು ಆಕೆಯನ್ನು ಕಡೂರಿನ ಬಾಲಾಜಿ ಆಸ್ಪತ್ರೆಗೆ ತೋರಿಸುತ್ತಿದ್ದೆ. ವೈದ್ಯರು ಪರೀಕ್ಷೆ ಮಾಡಿದಾಗ ಮಗು ಬೆಳವಣಿಗೆಯಾಗಿಲ್ಲ ಎಂದು ತಿಳಿಸಿರುತ್ತಾರೆ. ನಾನು, ನನ್ನ ತಂದೆ-ತಾಯಿ ಮತ್ತು ನನ್ನ ಸಹೋದರ ನೀಡಿದ ಮಾನಸಿಕ ಹಿಂಸೆಯಿಂದ ಅರ್ಜಿದಾರರಿಗೆ ಗರ್ಭಪಾತವಾಗಿದೆ ಎಂದರೆ ಸಾಕ್ಷಿಯು ಆಕೆ ವಿಷ ಕುಡಿದಿದ್ದರಿಂದ ಗರ್ಭಪಾತವಾಗಿದೆ ಎಂದು ನುಡಿಯುತ್ತಾರೆ.

ಅರ್ಜಿದಾರರು ನನ್ನ ವಿರುದ್ದ, ನನ್ನ ತಂದೆ-ತಾಯಿ ಮತ್ತು ನನ್ನ ಸಹೋದರನ ವಿರುದ್ದ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾರೆ ಎಂದು ಒಂದು ದೂರನ್ನು ಬಾಣಾವರ ಪೋಲೀಸ್ ಠಾಣೆಯಲ್ಲಿ ದಾಖಲು ಮಾಡಿದ್ದು, ಸದರಿ ಕೇಸು ಅರಸೀಕೆರೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ಬಾಣಾವರದಲ್ಲಿ ಸೈಟಿಗೆ ಅಡಿಗೆ ರೂ.1,500/- ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಮನೆ 30-40 ಅಡಿ ಅಳತೆಯ ಮನೆಯಾಗಿದ್ದು, ಅದರ ಮೌಲ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾವು ರಾಗಿ ಬೆಳೆಯನ್ನು ಬೆಳೆದಿದ್ದೇವೆ. ನನಗೆ ಒಂದು ಎಕರೆ ಆಸ್ತಿ ಇದೆ. ಬಾಣಾವರದಲ್ಲಿ ಜೀವನ ಮಾಡಲು ಮಾಸಿಕ 10 ಸಾವಿರ ಬೇಕು ಎಂದರೆ ಸಾಕ್ಷಿಯು ಒಂದರಿಂದ ಎರಡು ಸಾವಿರ ಸಾಕು ಎಂದು ನುಡಿಯುತ್ತಾರೆ. ನನಗೆ ವಾರ್ಷಿಕ 25 ಲಕ್ಷ ರೂಪಾಯಿ ವರಮಾನ ಇದೆ ಎಂದರೆ ಸರಿಯಲ್ಲ. ವರದಕ್ಷಿಣೆ ತರುವಂತೆ ಕಿರುಕುಳ ನೀಡಿದ್ದರಿಂದ ಅರ್ಜಿದಾರರಿಗೆ

ಗರ್ಭಪಾತವಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರರು ಈಗಲೂ ಕೂಡ ನಿಮ್ಮ ಜೊತೆ ಬರಲು ಸಿದ್ದರಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ ಸುಳ್ಳು ಹೇಳುತ್ತಿದ್ದಾರೆ ಎಂದು ನುಡಿಯುತ್ತಾರೆ. ಅರ್ಜಿದಾರರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ವಿನಾಃ ಕಾರಣ ಅವರಿಗೆ ಬೈದು, ಕುಡಿದು ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ.

ಅರ್ಜಿದಾರರಿಗೆ ಗರ್ಭಪಾತವಾಗಿ ಬೆನ್ನು ನೋವು ಆದ ಕಾರಣ ಅವರು ಶಿವಮೊಗ್ಗ ಮತ್ತು ಮಂಗಳೂರಿನಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವಂತೆ ಜೀವನಾಂಶ ಪಾವತಿ ಮಾಡುವ ಶಕ್ತಿ ನನಗೆ ಇದೆ ಎಂದರೆ ಸರಿಯಲ್ಲ. ಕಳೆದ ಎರಡು ವರ್ಷಗಳಿಂದ ಅರ್ಜಿದಾರರು ತನ್ನ ತವರು ಮನೆಯಲ್ಲಿ ವಾಸವಾಗಿದ್ದಾರೆ. ಅರ್ಜಿದಾರರು ಅವರ ತವರು ಮನೆಯಲ್ಲಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅರ್ಜಿದಾರರನ್ನು ನಾನು ಕರೆದರೂ ಕೂಡ ಆಕೆ ನನ್ನ ಜೊತೆ ಬರಲು ಒಪ್ಪಿರುವುದಿಲ್ಲ. ಜೀವನಾಂಶವನ್ನು ಕೊಡಲು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-1 ರಿಂದ ನಿಪಿ-9 ರಲ್ಲಿ ನನ್ನ ದೊಡ್ಡಪ್ಪನ ಮಗನ ಹೆಸರಿನಲ್ಲಿ ಯಾವುದೇ ಆಸ್ತಿ ಇಲ್ಲದೇ ಇದ್ದರೂ ಸಹ ಆತನ ಹೆಸರಿನಲ್ಲಿ ಆಸ್ತಿ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೀರಲಿಂಗೇಶ್ವರ ಪ್ರಾವಿಜನ್ ಸ್ಟೋರ್ ಬಿ.ಹೆಚ್. ರಸ್ತೆಯಲ್ಲಿ ಇದೆ ಎಂದರೆ ಸರಿ. ಒಂದು ದಿನಕ್ಕೆ 50 ಸಾವಿರದಿಂದ ಒಂದು ಲಕ್ಷ ವ್ಯಾಪಾರ ಆಗುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಸಿ.ಎನ್.ಚಂದನ್)
ಪ್ರಃಪ್ರಃದಃನ್ಯಾಃದಂ.,ರವರು, ಕಡೂರು.